# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ<br>Part – IV A | ಬೆಂಗಳೂರು, ಮಂಗಳವಾರ, ೧೨, ಆಕ್ಟೋಬರ್, ೨೦೨೧ (ಆಶ್ವಯುಜ, ೨೦, ಶಕವರ್ಷ, ೧೯೪೩)<br>BENGALURU, TUESDAY, 12, OCTOBER, 2021 (ASHWAYUJA , 20, SHAKAVARSHA, 1943) | ನಂ. ೮೩೩<br>No. 833 |
|---|---|---|


## PARLIAMENTARY AFFAIRS AND LEGISLATION SECRETARIAT

## NOTIFICATION

## NO: DPAL 28 SHASANA 2021, BENGALURU, DATED:12.10.2021

**THE KARNATAKA AGRICULTURAL PESTS AND DISEASES (AMENDMENT) Bill, 2021 ಇದಕ್ಕೆ 2021ರ ಅಕ್ಟೋಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 40 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ** (ಭಾಗ IV-A) **ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.**

### KARNATAKA ACT NO. 40 OF 2021

(First Published in the Karnataka Gazette Extra-ordinary on the 12th day of October 2021)

### THE KARNATAKA AGRICULTURAL PESTS AND DISEASES (AMENDMENT) ACT, 2021

(Received the assent of the Governor on the 11th day of October, 2021)

An Act to amend the Karnataka Agricultural Pests and Diseases Act, 1968.

Whereas it is expedient to amend the Karnataka Agricultural Pests and Diseases Act, 1968 (Karnataka Act 01 of 1969) for the purposes hereinafter appearing;

Be it enacted by the Karnataka State Legislature in the seventy second year of the Republic of India, as follows:-

**1. Short title and commencement.-** (1) This Act may be called the Karnataka Agricultural Pests and Diseases (Amendment) Act, 2021.

(2) It shall come into force at once.

**2. Amendment of section 2.-** In the Karnataka Agricultural Pests and Diseases Act, 1968 (Karnataka Act 01 of 1969)(hereinafter referred to as the principal Act) in section 2,-

(i) for clauses (2) and (3), the following shall be substituted, namely:-

"(2) "Director of Agriculture" means, any officer appointed by the State Government to be the Head of the Department of Agriculture and includes the Head of the Department of Horticulture or Sericulture or Animal Husbandry or Fisheries or Forest and every person who for the time being performs the duties of the Head of the Department of Agriculture or Horticulture or Sericulture or Animal Husbandry or Fisheries or Forest as the case may be."

"(3) "District officer" means, the officer appointed as such by the State Government to the department concerned and includes every person who for the time being performs the duties of the district officer of the department concern to Agriculture, Horticulture, Sericulture, Animal Husbandry or Fisheries or Forest as the case may be."

(ii) for clauses (11) and (12) the following shall be substituted, namely:-

"(11) "Plant" includes all agricultural, horticultural, sericulture, forest crops, trees, bushes or herbs, climbers, creepers, tubers or rhizomes, suckers or bulbs or corms/corm lets and includes fruits, leaves, trunk, roots, bark or cutting or any part thereof but does not include the seed.

Provided that, the State Government may, by notification direct that the seed of any particular plant shall be deemed to be a plant."

"(12) "Plant Disease" means, any fungal, bacterial, viral, nematode, parasitic, mycoplasma or other disease or syndrome declared by the notification under section 3 to be a plant disease."

**3. Amendment of section 4.-** (i) In section 4 of the principal Act, in sub-section (1),-

(a) for the words, "the Deputy Director of Agriculture" the words "the District Officer Concerned" shall be substituted;

(b) in clause (ii), for the words "any male person", the words "any person" shall be substituted; and

(ii) in sub-section (2), after the words "customary mode" the words "or through print or and electronic or mass media" shall be inserted.

**4. Amendment of section 5.-** in section 5 of the principal Act, in clause (ii), for the words “every male person”, the words “every person” shall be substituted.

**5. Amendment of section 12.-** in section 12 of the principal Act, for the explanation, the following shall be substituted, namely:-

“**Explanation.-** for purpose of this section “village officer” includes village accountant, the panchayat development officer, panchayat secretary, agriculture assistant, horticulture assistant, sericulture inspector, Sericulture demonstrator or any other Government officer concerned working in that area.”

**6. Amendment of section 13.-** (1) in section 13 of the principal Act,-

(a) in sub-sections (1), (2) and (3), for the words “fifty rupees” wherever occurs, the words “five thousand rupees” shall be substituted; and

(b) in sub- section (4), in clause (b), for the words “five hundred rupees” the words “twenty-five thousand rupees” shall be substituted.

**7. Amendment of section 14.-** in section 14 of the principal Act, for the words “Deputy Director of Agriculture” the words “District Officer concerned” shall be substituted.

By Order and in the name of
the Governor of Karnataka,

**G.SRIDHAR**
Secretary to Government
Department of Parliamentary
Affairs and Legislation

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 28 ಶಾಸನ 2021, ಬೆಂಗಳೂರು, ದಿನಾಂಕ:12.10.2021**

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Agricultural Pests and Diseases (Amendment) Act, 2021 (Karnataka Act 40 of 2021) ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 40**

(2021 ರ ಅಕ್ಟೋಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ (ತಿದ್ದುಪಡಿ) ಅಧಿನಿಯಮ, 2021

(2021 ರ ಅಕ್ಟೋಬರ್ ತಿಂಗಳ 11ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ಅಧಿನಿಯಮ, 1968ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ಅಧಿನಿಯಮ, 1968ನ್ನು (1969ರ ಕರ್ನಾಟಕ ಅಧಿನಿಯಮ 01) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ ಅಧಿನಿಯಮ, 1968ರ (1969ರ ಕರ್ನಾಟಕ ಅಧಿನಿಯಮ 01) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) (2) ಮತ್ತು (3)ನೇ ಖಂಡಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) "ಕೃಷಿ ನಿರ್ದೇಶಕ" ಎಂದರೆ ರಾಜ್ಯ ಸರ್ಕಾರವು ಕೃಷಿ ಇಲಾಖೆಯ ಮುಖ್ಯಸ್ಥನಾಗಿ ನೇಮಿಸಿದ ಯಾವೊಬ್ಬ ಅಧಿಕಾರಿ ಮತ್ತು ತೋಟಗಾರಿಕೆ ಅಥವಾ ರೇಷ್ಮೆ ಅಥವಾ ಪಶುಸಂಗೋಪನೆ ಅಥವಾ ಮೀನುಗಾರಿಕೆ ಅಥವಾ ಅರಣ್ಯ ಇಲಾಖೆಯ ಮುಖ್ಯಸ್ಥರನ್ನು ಹಾಗೂ ಸಂದರ್ಭಾನುಸಾರವಾಗಿ ಕೃಷಿ ಅಥವಾ ತೋಟಗಾರಿಕೆ ಅಥವಾ ರೇಷ್ಮೆ ಅಥವಾ ಪಶುಸಂಗೋಪನೆ ಅಥವಾ ಮೀನುಗಾರಿಕೆ ಅಥವಾ ಅರಣ್ಯ ಇಲಾಖೆಯ ಮುಖ್ಯಸ್ಥರಾಗಿ ತತ್ಕಾಲದಲ್ಲಿ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಒಳಗೊಳ್ಳುವುದು.

(3) “ಜಿಲ್ಲೆಯ ಅಧಿಕಾರಿ” ಎಂದರೆ ರಾಜ್ಯ ಸರ್ಕಾರವು ಸಂಬಂಧಪಟ್ಟ ಇಲಾಖೆಗೆ ಹಾಗೆ ನೇಮಿಸಿದ ಅಧಿಕಾರಿ ಮತ್ತು ಸಂದರ್ಭಾನುಸಾರ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಅಥವಾ ಮೀನುಗಾರಿಕೆ ಅಥವಾ ಅರಣ್ಯ ಇವುಗಳಿಗೆ ಸಂಬಂಧಿಸಿದ ಇಲಾಖೆಯ ಜಿಲ್ಲೆಯ ಅಧಿಕಾರಿಯ ಕರ್ತವ್ಯಗಳನ್ನು ತತ್ಕಾಲದಲ್ಲಿ ನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಒಳಗೊಳ್ಳುವುದು.”

(ii) (11) ಮತ್ತು (12)ನೇ ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“(11) “ಸಸ್ಯ” ಎಂಬ ಪದವು ಎಲ್ಲಾ ಕೃಷಿ, ತೋಟಗಾರಿಕೆ, ರೇಷ್ಮೆ, ಅರಣ್ಯ ಬೆಳೆಗಳು, ಮರಗಳು, ಕುರುಚಲು ಗಿಡಗಳು ಅಥವಾ ಔಷಧೀಯ ಸಸ್ಯಗಳು, ಏರುಬಳ್ಳಿಗಳು, ಬಳ್ಳಿಗಳು, ಗೆಡ್ಡೆಗಳು ಅಥವಾ ಕಾಂಡಬೇರುಗಳು, ಬೇರುಮೊಳಕೆಗಳು, ಅಥವಾ ಕಂದಗಡ್ಡೆಗಳು (bulbs) ಅಥವಾ ಗೆಡ್ಡೆಗೆಣಸುಗಳನ್ನು (cormbets) ಒಳಗೊಳ್ಳುವುದು ಹಾಗೂ ಹಣ್ಣುಗಳು, ಎಲೆಗಳು, ಕಾಂಡ, ಬೇರುಗಳು, ತೊಗಟೆ ಅಥವಾ ಕಸಿಕಾಂಡ ಅಥವಾ ಅದರ ಯಾವುದೇ ಭಾಗವನ್ನು ಒಳಗೊಳ್ಳುವುದು, ಆದರೆ ಬೀಜವನ್ನು ಒಳಗೊಳ್ಳುವುದಿಲ್ಲ.

ಪರಂತು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಯಾವುದೇ ನಿರ್ದಿಷ್ಟ ಸಸ್ಯದ ಬೀಜವನ್ನು ಸಸ್ಯವೆಂದು ಭಾವಿಸತಕ್ಕದ್ದು ಎಂದು ನಿರ್ದೇಶಿಸಬಹುದು.

(12) “ಸಸ್ಯ ರೋಗ” ಎಂದರೆ 3ನೇ ಪ್ರಕರಣದಡಿಯಲ್ಲಿ ಅಧಿಸೂಚನೆಯ ಮೂಲಕ ಸಸ್ಯರೋಗವೆಂದು ಘೋಷಿಸಲಾದ ಯಾವುದೇ ಶಿಲೀಂಧ್ರದ, ಬ್ಯಾಕ್ಟೀರಿಯಾದ, ವೈರಸ್ಸಿನ, ನೆಮಟೊಡ್, ಪರಾವಲಂಬಿ, ಮೈಕೊಪ್ಲಾಸ್ಮಾ ಅಥವಾ ಇತರೆ ರೋಗಗಳು ಅಥವಾ ರೋಗ ಲಕ್ಷಣ.”

**3. 4ನೇ ಪ್ರಕರಣದ ತಿದ್ದುಪಡಿ,-** (i) ಮೂಲ ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ,-

(ಎ) “ಕೃಷಿ ಉಪ-ನಿರ್ದೇಶಕರು” ಎಂಬ ಪದಗಳ ಬದಲಾಗಿ “ಸಂಬಂಧಪಟ್ಟ ಜಿಲ್ಲೆಯ ಅಧಿಕಾರಿ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (ii)ನೇ ಖಂಡದಲ್ಲಿ “ಯಾರೇ ಪುರುಷ” ಎಂಬ ಪದಗಳ ಬದಲಾಗಿ “ಯಾರೇ ವ್ಯಕ್ತಿ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು,

(ii) 2ನೇ ಉಪಪ್ರಕರಣದಲ್ಲಿ “ರೂಢಿಗತ ಪದ್ಧತಿಯ” ಎಂಬ ಪದಗಳ ತರುವಾಯ “ಅಥವಾ ಮುದ್ರಣ ಅಥವಾ ಮತ್ತು ವಿದ್ಯುನ್ಮಾನ ಅಥವಾ ಸಮೂಹ ಮಾಧ್ಯಮದ” ಎಂಬ ಪದಗಳನ್ನು ಸೇರಿಸತಕ್ಕದ್ದು.

**4. 5ನೇ ಪ್ರಕರಣದ ತಿದ್ದುಪಡಿ:-** ಮೂಲ ಅಧಿನಿಯಮದ 5ನೇ ಪ್ರಕರಣದ (ii)ನೇ ಖಂಡದಲ್ಲಿ “ಪ್ರತಿಯೊಬ್ಬನ” ಎಂಬ ಪದಗಳಿಗೆ “ ಪ್ರತಿಯೊಬ್ಬ ವ್ಯಕ್ತಿಯ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 12ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 12ನೇ ಪ್ರಕರಣದ ವಿವರಣೆಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“ **ವಿವರಣೆ**,- ಈ ಪ್ರಕರಣದ ಉದ್ದೇಶಕ್ಕಾಗಿ “ಗ್ರಾಮಾಧಿಕಾರಿ” ಎಂಬ ಪದವು ಗ್ರಾಮ ಲೆಕ್ಕಿಗ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪಂಚಾಯಿತಿ ಕಾರ್ಯದರ್ಶಿ, ಕೃಷಿ ಸಹಾಯಕ,ತೋಟಗಾರಿಕೆ ಸಹಾಯಕ, ರೇಷ್ಮೆ ನಿರೀಕ್ಷಕರು, ರೇಷ್ಮೆ ಪ್ರದರ್ಶಕ ಅಥವಾ ಸಂಬಂಧಪಟ್ಟ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಯಾರೇ ಇತರೆ ಸರ್ಕಾರಿ ಅಧಿಕಾರಿಯನ್ನು ಒಳಗೊಳ್ಳುವುದು.”

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**6. 13ನೇ ಪ್ರಕರಣದ ತಿದ್ದುಪಡಿ.-** (1) ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(ಎ) (1), (2) ಮತ್ತು (3)ನೇ ಉಪಪ್ರಕರಣಗಳಲ್ಲಿ "ಐವತ್ತು ರೂಪಾಯಿಗಳವರೆಗಿನ" ಎಂಬ ಪದಗಳು ಬರುವೆಡೆಗಳಲ್ಲಿ "ಐದು ಸಾವಿರ ರೂಪಾಯಿಗಳವರೆಗಿನ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) (4)ನೇ ಉಪಪ್ರಕರಣದ (ಬಿ) ಖಂಡದಲ್ಲಿ "ಐದುನೂರು ರೂಪಾಯಿಗಳವರೆಗಿನ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗಿನ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 14ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 14ನೇ ಪ್ರಕರಣದಲ್ಲಿ "ಕೃಷಿ ಉಪ- ನಿರ್ದೇಶಕರು" ಎಂಬ ಪದಗಳ ಬದಲಾಗಿ "ಸಂಬಂಧಪಟ್ಟ ಜಿಲ್ಲೆಯ ಅಧಿಕಾರಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

The above translation of **the Karnataka Agricultural Pests And Diseases (Amendment) Act, 2021 (Karnataka Act 40 of 2021)** Shall be authoritative text in Kannda language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE